


# ಭೌತಿಕ ಮತ್ತು ಮನೋಲೋಕದ ಅಪರೂಪದ ಹದ

ಎದುರಿಗೆ ನಡೆಯುತ್ತಿರುವುದರ ಮೂಲಕವೇ ಒಂದು ಮನೋಲೋಕವನ್ನೂ ಕಟ್ಟುವ ಸಶಕ್ತ ಮಾದರಿಯಾಗಿ ಈ ಕಿರುಚಿತ್ರವನ್ನು ನೋಡಬಹುದು.

■ ಗೌರಿ

ಭೌತಿಕವಾಗಿ ಕಾಣುತ್ತಿರುವ ವಸ್ತುಗಳ ಮೂಲಕ ಕಾಣದ ಮನೋಲೋಕದ ಪಲಕುಗಳನ್ನು ಕಟ್ಟಿಕೊಡುವುದು ಎಲ್ಲ ಒಳ್ಳೆಯ ಸಿನಿಮಾಗಳ ಲಕ್ಷಣವೂ ಹೌದು. ಈ ಎರಡು ಲೋಕಗಳಲ್ಲಿ ತೆರೆಯ ಮೇಲೆ ಕಾಣುವ ಲೋಕ ಮತ್ತು ಅದರ ಮೂಲಕ ಬಿಚ್ಚಿಕೊಳ್ಳುವ ಮನೋಲೋಕದ ಕಾಣ್ಕೆ ಎರಡರ ಹದ ನಿರ್ಮಾಪಕನ ಪ್ರಾಜ್ಞತೆಯನ್ನು ಅವಲಂಬಿಸಿದ್ದು. ಹೊರಗಿನ ಲೋಕದ ಗದ್ದಲವೇ ಹೆಚ್ಚಾದರೆ ಅದು ಆಕರ್ಷಕ ರ್‍ಯಾಪರ್ ಹೊದ್ದಿಸಿದ ಪೊಳ್ಳು ಪೊಟ್ಟಣದ ಹಾಗೆ ಕಾಣಿಸುತ್ತದೆ. ಅದೇ ಒಳಗಿನ ಲೋಕವನ್ನು ಸಂಕೇತಿಸುವುದೇ ಮುಖ್ಯ ಉದ್ದೇಶವಾಗಿಬಿಟ್ಟರೆ ಭೌತಿಕ ವಸ್ತುಗಳೆಲ್ಲವೂ ಬರೀ ಸಂಕೇತಗಳಷ್ಟೇ ಆಗಿ ವಾಸ್ತವದ ನೆಲೆಗಟ್ಟೇ ಕುಸಿದುಬಿಡುತ್ತದೆ.

‘ಲಿರಿಕಲಿ ಬ್ಲೀಟಿಂಗ್ ಹಾರ್ನ್ಸ್’ ಕಿರುಚಿತ್ರವು ಈ ಎರಡರಲ್ಲಿ ಯಾವುದನ್ನೂ ತನ್ನ ಸಿನಿಮಾದ ಅಂತಿಮ ಉದ್ದೇಶವಾಗಿಸಿಕೊಳ್ಳದೆ, ತನ್ನಷ್ಟೇ ಶ್ರದ್ಧೆಯಿಂದ ಕಥನವನ್ನು ಒಳಬಿಟ್ಟುಕೊಳ್ಳುವ ಶಕ್ತಿ ವೀಕ್ಷಕನಿಗೂ ಇದೆ ಎಂಬ ನಂಬಿಕೆಯಲ್ಲಿ ರೂಪುಗೊಂಡಿದೆ. ಹಾಗಾಗಿಯೇ ಬರೀ ಉದ್ದೇಶದ ಕಾರಣಕ್ಕಷ್ಟೇ ಅಲ್ಲದೆ, ಮೇಕಿಂಗ್ ಕಾರಣಕ್ಕೂ ಗಮನಸೆಳೆಯುತ್ತದೆ.

ಭೌತಿಕವಾಗಿ ನಡೆಯುತ್ತಿರುವ ಕಥನವು ಅದರಷ್ಟಕ್ಕೆ ಸ್ವತಂತ್ರವಾಗಿರುತ್ತಲೇ ಅದು ಮನೋಲೋಕಕ್ಕೂ ಪ್ರತಿಸ್ಪಂದಿಯಾಗಿ ಬೆಳೆಯುವುದು ಈ ಕಿರುಚಿತ್ರದ ಹೆಗ್ಗಳಿಕೆ.

ಹೆದ್ದಾರಿಯಲ್ಲಿ ಹೊರಟಿರುವ ಲಾರಿ ಡ್ರೈವರನೊಬ್ಬನ ಒಂದು ದಿನದ ಪ್ರಯಾಣವೇ ಈ ಕಿರುಚಿತ್ರದ ಕಥನವ್ಯಾಪ್ತಿ. ಮಳೆಗಾಲದ ನಸುಕಿನ ಮಂದಬೆಳಕಲ್ಲಿ ಹೊರಡುವ ಲಾರಿ ಡ್ರೈವರ್‌ನನ್ನು ಹೆದ್ದಾರಿ ಪೊಲೀಸನೊಬ್ಬ ತಡೆಯುತ್ತಾನೆ. ಡ್ರೈವರ್‌ನಿಂದ ಲಂಚಪಡೆದು ಬಿಡುತ್ತಾನೆ.



ಹೆಸರು: ಲಿರಿಕಲಿ ಬ್ಲೀಟಿಂಗ್ ಹಾರ್ನ್ಸ್
ನಿರ್ಮಾಣ: ಸೃಷ್ಟಿ ಚತುರ್ವೇದಿ
ನಿರ್ದೇಶನ: ವರುಣ್ ಚೋಪ್ರಾ
ಛಾಯಾಗ್ರಹಣ: ಅಭಿನವ್ ಕುಮಾರ್
ಧ್ವನಿ ವಿನ್ಯಾಸ: ಜೋ ಯೋ ಕಿಮ್
ನಟನೆ: ತವೇಶ್ ಶರ್ಮಾ

‘ಮಹಾನಗರಗಳಲ್ಲಿ ಆಟೊದವರು ಮಾಡುವ ಹಾರ್ನ್ ಅವರ ಆರ್ತನಾದ’ ಎಂಬರ್ಥದ ಮಾತನ್ನು ಜಯಂತ ಕಾಯ್ಕಿಣಿ ಹೇಳಿದ್ದರು. ಈ ಕಿರುಚಿತ್ರದಲ್ಲಿ ಅದನ್ನು ಲಾರಿಗೆ ಅನ್ವಯಿಸಬಹುದು. ಹೆದ್ದಾರಿಯಲ್ಲಿ ಒಬ್ಬಂಟಿಯಾಗಿ ಲಾರಿಯಲ್ಲಿ ಹೋಗುತ್ತಲೇ ಇರುವ ಡ್ರೈವರ್, ಬದುಕಿನಲ್ಲಿ ಕೆಲವು ಅಡ್ಡದಾರಿಗಳನ್ನೂ ಹಿಡಿದಿದ್ದಾನೆ. ಹಾಗಾಗಿ ಅವನಿಗೆ ಗುಹ್ಯರೋಗವೊಂದು ತಗುಲಿದೆ. ಹಾಗಾಗಿ ಚಿತ್ರಮಂದಿರದಲ್ಲಿ ಕಾಣಿಸಿಕೊಳ್ಳುವ ಲೈಂಗಿಕ ಕಾರ್ಯಕರ್ತೆಯೂ ಅವನ ಜೊತೆಗೆ ಕೂಡಲು ಒಪ್ಪುವುದಿಲ್ಲ. ಹಾಗೆಯೇ ಅವನ ಸಂಸಾರವೂ ಒಡೆದುಹೋಗುವುದರಲ್ಲಿದೆ ಎಂಬುದು ಟೆಲಿಫೋನ್ ಮಾತುಕತೆಯಲ್ಲಿ ತಿಳಿಯುತ್ತದೆ.

ಬೆಳಿಗ್ಗೆಯವರೆಗೆ ಡ್ರೈವ್ ಮಾಡಿ ಬರುವ ಡ್ರೈವರ್ ರಸ್ತೆ ಪಕ್ಕದಲ್ಲಿನ ಒಬ್ಬರಲ್ಲಿ ತಾನು ಹೋಗಬೇಕಾದ ಊರು ಇನ್ನು ಎಷ್ಟು ದೂರ ಇದೆ ಎಂದು ಕೇಳುತ್ತಾನೆ. ಅವನು, ಆ ಊರಿಗೆ ಹೋಗುವ ದಾರಿ ಇದಲ್ಲವೇ ಅಲ್ಲ. ನೀವು ತಪ್ಪು ದಾರಿಯಲ್ಲಿ ಬಂದಿದ್ದೀರಿ ಎನ್ನುತ್ತಾನೆ.

ದೊಡ್ಡ ಗದ್ದೆಬಯಲಲ್ಲಿ ಡ್ರೈವರ್, ಎಚ್‌ಐವಿ ಸಹಾಯವಾಣಿಗೆ ಕರೆ ಮಾಡುವುದರೊಂದಿಗೆ ಈ ಕಿರುಚಿತ್ರ ಮುಗಿಯುತ್ತದೆ.

ಕಿರುಚಿತ್ರದಲ್ಲಿನ ಒಂದೊಂದು ಫ್ರೇಮ್ ಕೂಡ ಇಡೀ ಚಿತ್ರದ ಕಥನದ ಆತ್ಮವಾದ ಅಸ್ಥಿರತೆ, ಆತಂಕ, ಅಸಹಾಯಕ ಭಾವಗಳನ್ನು ಉದ್ದೀಪಿಸುವ ಹಾಗೆ ಸಂಯೋಜನೆಗೊಂಡಿದೆ. ನಿರ್ದೇಶಕರಿಗೆ, ಉಳಿದ ವಸ್ತುಗಳ ಹಾಗೆಯೇ ನಟನೂ ತನ್ನ ಅಭಿವ್ಯಕ್ತಿಯ ಒಂದು ಸಲಕರಣೆ ಅಷ್ಟೆ. ಹಾಗಾಗಿ ಅವನ ಮುಖ, ಮುಖಭಾವಗಳನ್ನು ತೋರಿಸುವುದಕ್ಕಿಂತ, ಅವನ ಚಲನೆಯಿಂದ, ಇಡೀ ಫ್ರೇಮ್‌ನಲ್ಲಿ ಅವನ ನಡೆಯಿಂದ ಹುಟ್ಟುವ ಭಾವದ ಕಡೆಗೇ ಅವರ ಗಮನವಿದೆ.

ಅಚ್ಚುಕಟ್ಟಾದ ಸಂಕಲನ, ಧ್ವನಿ ವಿನ್ಯಾಸಗಳು ಇಡೀ ಕಿರುಚಿತ್ರಕ್ಕೊಂದು ಗಾಢವಾದ ಪರಿಸರವನ್ನು ಕಟ್ಟಿಕೊಡಲು ಶಕ್ತವಾಗಿವೆ. ಕಿರುಚಿತ್ರ ಮಾಧ್ಯಮವನ್ನು ಅದಕ್ಕೆ ಹೊಂದುವ ಕಥನದ ಮೂಲಕವೇ ಹೇಗೆ ಧ್ವನಿಪೂರ್ಣವಾಗಿ ಬೆಳಗಬಹುದು ಎಂಬುದಕ್ಕೆ ಉದಾಹರಣೆಯಾಗಿ ಈ ಕಿರುಚಿತ್ರವನ್ನು ನೋಡಬಹುದು.

ಈ ಕಿರುಚಿತ್ರ ವೀಕ್ಷಣೆಗೆ https://bit.ly/3fvraN1 ಕೊಂಡಿ/ಕ್ಯೂಆರ್ ಕೋಡ್ ಸ್ಯಾನ್ ಮಾಡಿ.